
"ಶ್ರೀಪತಿರ್ಮಾನದೋ ನಃ"

# ಶ್ರೀಹರಿದಾಸಭಾರತೀ

(ಶ್ರೀಹರಿದಾಸಸಾಹಿತ್ಯಪ್ರಚಾರಕ್ಕಾಗಿ ಮೀಸಲಾದ ಮಾಸಪತ್ರಿಕೆ)

ಸಂಪುಟ ೧ ★ ಶ್ರೀ ವಿಕೃತಿ—ಮಾಘ ★ ಸಂಚಿಕೆ ೪



ಸಂಪಾದಕರು:
ಶ್ರೀಹರಿದಾಸರತ್ನಂ
ಗೋಪಾಲದಾಸರು

ಚಂದಾದರ:
ವಾರ್ಷಿಕ ಚಂದಾ ರೂ. ೩
ಬಿಡಿ ಪ್ರತಿ ಆಣೆ ೫

## ವಿಷಯಾನುಕ್ರಮಣಿಕೆ


| | |
|---|---|
| ಮಂಗಳಾಚರಣೆ | ೧ |
| ಶ್ರೀಹರಿಭಜನಪದ್ಧತಿ | ೩ |
| ಶ್ರೀ ಸರ್ವಜ್ಞಶಾಸ್ತ್ರಗತ ಪದಾರ್ಥತರತಮವಿಚಾರ | ೧೩ |
| ಸಂಪಾದಕೀಯ | ೧೮ |
| ತತ್ತ್ವಸುವಾಲಿ | ೭ |


# "ಶ್ರೀಹರಿದಾಸಭಾರತೀ"

ಗ್ರಾಹಕರಿಗೆಲ್ಲ ನಮ್ಮ

## ಸವಿನಯ ಧನ್ಯವಾದಗಳು

ಈಗ ನಾಲ್ಕನೇ ಸಂಚಿಕೆಯು ತಮ್ಮ ಕರಗತವಾಗಿದೆ. ಚಂದಾಹಣ (ರೂ. ೩—೦—೦) ವನ್ನು ಸಲ್ಲಿಸದಿರುವವರು ಫಾಲ್ಗುಣಮಾಸದ ಸಂಚಿಕೆ ಹೊರಡುವುದರೊಳಗಾಗಿ ತಮ್ಮ ಚಂದಾಹಣವನ್ನು ಕಳುಹಿಸಿಕೊಟ್ಟು ಈ ಹರಿದಾಸ-ಸಾಹಿತ್ಯಪ್ರಚಾರಕಾರ್ಯಕ್ಕೆ ಸಂಪೂರ್ಣವಾದ ಪ್ರೋತ್ಸಾಹ ನೀಡಬೇಕೆಂದು ವಿಜ್ಞಾಪಿಸುತ್ತೇವೆ: ಅಲ್ಲದೆ ಇಂತಹ ಧರ್ಮ-ಕಾರ್ಯಕ್ಕೆ ತಮ್ಮಗಳ ಬೆಂಬಲ ತಾನೇತಾನಾಗಿ ಬರುತ್ತಿರಲಿ ಎಂದು ಹಾರೈಸುತ್ತೇವೆ.

—ಸಂ.

"ಶ್ರೀಪತಿರ್ಜ್ಞಾನದೋ ನಃ"



# ಶ್ರೀಹರಿದಾಸಭಾರತೀ

[ಶ್ರೀಹರಿದಾಸಸಾಹಿತ್ಯ ಪ್ರಚಾರಕ್ಕಾಗಿ ಮೀಸಲಾದ
ಮಾಸಪತ್ರಿಕೆ]

ಪವಮಾನಮತಪಿಡಿದು ನಿನ್ನ ಶ್ರವಣ ಮಾ-
ಡುವರ ಸಂಗ ಪಾಲಿಸು ವಿಜಯವಿಠ್ಠಲ ವಲಿದು

ಸಂಪುಟ ೧ | ಶ್ರೀ ವಿಕೃತಿ—ಮಾಘ (೧೯೫೧—ಫೆಬ್ರವರಿ) | ಸಂಚಿಕೆ ೪

## ಮಂಗಳಾಚರಣೆ

ನಮೋ ವಸ್ತಾತ್ತ್ವಿಕಾ ದೇವಾಃ ವಿಷ್ಣುಭಕ್ತಿಪರಾಯಣಾಃ
ಧರ್ಮಮಾರ್ಗೇ ಪ್ರೇರಯಂತು ಭವನ್ತುಸ್ಸರ್ವ ಏವ ಹಿ ೧

ತತ್ವಾಭಿಮಾನಿಗಳಾದ ದೇವತೆಗಳಿರಾ! ತಾವುಗಳೆಲ್ಲ ಶ್ರೀವಿಷ್ಣುಭಕ್ತಿನಿರತರು. ತಮಗೆ ನಮಸ್ಕಾರ. ನನ್ನನ್ನು ಜಗದ್ಧಾರಕನಾದ ಶ್ರೀವಿಷ್ಣುವಿಗೆ ಸಮ್ಮತವಾಗಿಯೇ ನಡೆಯುವಂತೆ ಪ್ರೇರಿಸೋಣವಾಗಲಿ.

ಆಪಾದಮೌಳಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ೨

ಗುರುಗಳ ರೂಪವನ್ನು ಅವರ ಪಾದಗಳಿಂದ ಪ್ರಾರಂಭಿಸಿ ಶಿರಸ್ಸಿನ ವರೆವಿಗೆ ಸ್ಮರಣೆಮಾಡಬೇಕು. ಹಾಗೆ ಸ್ಮರಿಸುವುದರಿಂದ ವಿಘ್ನಗಳು ಸಂಪೂರ್ಣವಾಗಿ ನಾಶವಾಗುತ್ತವೆ ಮತ್ತು ಆಶೆಗಳು ಫಲಿಸುತ್ತವೆ.

ಪೃಥ್ವೀಮಂಡಲಮಧ್ಯಸ್ಥಾಃ ಪೂರ್ಣಬೋಧಮತಾನುಗಾಃ
**ವೈಷ್ಣವಾ ವಿಷ್ಣುಹೃದಯಾಃ** ತಾನ್ನಮಸ್ಯೇ ಗುರೂನ್ಮಮ ೩

ಭೂಮಂಡಲದಲ್ಲಿ, ಶ್ರೀಮದಾನಂದತೀರ್ಥಭಗವತ್ಪಾದರ ಮತವನ್ನವಲಂಬಿಸಿದ, ಸರ್ವತ್ರ ವ್ಯಾಪ್ತನಾದ ಶ್ರೀಹರಿಯನ್ನು ಹೃದಯದಲ್ಲಿ ಕಂಡ, ವೈಷ್ಣವರೆಲ್ಲ ನನ್ನ ಗುರುಗಳು. ಅವರೆಲ್ಲರನ್ನೂ ನಮಸ್ಕರಿಸುತ್ತೇನೆ.

ಮನ್ಮನೋಭೀಷ್ಟವರದಂ ಸರ್ವಾಭೀಷ್ಟಫಲಪ್ರದಂ
ಪುರಂದರಗುರುಂ ವಂದೇ ದಾಸಶ್ರೇಷ್ಠ ದಯಾನಿಧಿಂ ೪

ನನ್ನ ಬಯಕೆಗಳು ಈಡೇರುವಂತೆ ವರಪ್ರದಾನ ಮಾಡುವ, ಎಲ್ಲ ಭಕ್ತರ ಆಶೆಗಳನ್ನೂ ಸಲ್ಲಿಸುವ, ಶ್ರೀಹರಿದಾಸರಲ್ಲಿ ಶ್ರೇಷ್ಠರಾದ, ದಯಾಕರರಾದ ಶ್ರೀ ಪುರಂದರನಾಮಕ ಗುರುಗಳನ್ನು ನಮಿಸುವೆನು.

ಪುರಂದರಾಬ್ಧಿಸಂಭೂತೋ ವಿಜಯಾರ್ಯಸುಚಂದ್ರಮಾಃ
ಲಸನ್ಮತ್ಸ್ವಾಂತ ಖೇ ನಿತ್ಯಂ ತಾಪತ್ರಯನಿವಾರಕಃ ೫

ಶ್ರೀ ಪುರಂದರದಾಸಾರ್ಯರೆಂಬ ಸಮುದ್ರದಲ್ಲಿ ಅವತರಿಸಿದ ಶ್ರೀ ವಿಜಯದಾಸಾರ್ಯರೆಂಬ ಶ್ರೇಷ್ಠಚಂದ್ರನು ನನ್ನ ಮನಸ್ಸೆಂಬ ಆಕಾಶದಲ್ಲಿ ಸರ್ವದಾ ಬೆಳಗುತ್ತಾ ಮೂರು ಬಗೆಯ ತಾಪಗಳನ್ನೂ ನಿವಾರಿಸುವವನಾಗಲಿ.

(ಈ ಮೂಲ ಶ್ಲೋಕದಲ್ಲಿ "ಭವತು" ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.)

ಶ್ರೀ ಗುರುಭ್ಯೋನಮಃ

ಶ್ರೀವಿಜಯವಿಠ್ಠಲ ಪ್ರಸೀದ

# ಶ್ರೀಹರಿಭಜನ ಪದ್ಧತಿ



[ಸಂಕ್ಷೇಪ ರೂಪದಲ್ಲಿ]

## ಆದಿಮಂಗಳ

ರಾಗ ನಾಟಿ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತೀದೇವೀ ಮು-
ಕುತಿಪಥಕೆ ಮನವೀವ ಮಹರುದ್ರದೇವರು ಭ-
ಕುತಿದಾಯಕಳು ಭಾರತಿದೇವಿಯು ಯು-
ಕುತಿಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡಿಸಿ ಸುಜ್ಞಾನ ಮತಿಯಿತ್ತು
ಗತಿ ಪಾಲಿಸುವ ನಮ್ಮ ಪವಮಾನನು
ಚಿತ್ತದಲಿ ಆನಂದಸುಖವನೀವಳು ರಮಾ
ಭಕ್ತಜನರೊಡೆಯ ಶ್ರೀ ಪುರಂದರವಿಠ್ಠಲನು
ಸತತ ಇವರೊಳು ನಿಂತು ಕೃತಿಯ ನಡಿಸುವನು



## ಶ್ರೀ ಗಣಪತಿ ಸ್ತೋತ್ರ

ರಾಗ ಕಮಾಚ್, ಆದಿತಾಳ

ಅಂಬಾತನಯ ಪ

ಅಂಬಾತನಯ ಹೇರಂಬ ಪೂರ್ಣಕರು-
ಣಾಂಬುಧಿ ತವ ಚರಣಾಂಬುಜಕೆರಗುವೆ ಅ. ಪ

ದಶನವೋದಕಪಾಶಾಂಕುಶಪಾಣಿ
ಅಸಮುಸಹ ಚಾರುದೇಷ್ಣ ವಂದಿಪೆ ೧

ಬೃಂದಾರಕಬೃಂದವಂದಿತಚರಣಾರ–
ವಿಂದಯುಗಳ ದಯದಿಂದ ನೋಡೊ ಎನ್ನ ೨

ಪಾತಕವನಧಿಪ್ರದ್ಯೋತಸನ್ನಿಭಜಗ–
ನ್ನಾಥವಿಠ್ಠಲನ ಸಂಪ್ರೀತಿವಿಷಯ ಜಯ ೩

## ಶ್ರೀ ಪಾರ್ವತೀದೇವಿಯ ಸ್ತೋತ್ರ

ರಾಗ ನಾದನಾಮಕ್ರಿಯೆ ಆದಿತಾಳ

ಪಾರ್ವತಿ ಪಾಲಿಸೆನ್ನ ಮಾನಿನಿ ರನ್ನೆ
ಪಾರ್ವತಿ ಪಾಲಿಸೆನ್ನ ಪ

ಪಾರ್ವತಿ ಭಕತರಸಾರಥಿ ವಂದಿಪೆ
ಸುರಪತಿಗಜಮುಖಮೂರುತಿಮಾತೇ ಅ. ಪ

ಮನದಭಿಮಾನಿಯೆ ನೆನೆವೆನು ನಿನ್ನನು
ಅನುಕರಿಸೆನ್ನನು ಅಂಬುಜಪಾಣಿ ೧

ಮಂಗಳೆ ಮೃಡನಂತರಂಗಳೆ ಹರಿಪದ–
ಭೃಂಗಳೆ ತುಂಗಳೆ ಪನ್ನಗವೇಣಿ ೨

ಗುಣಪೂರ್ಣವೇಣುಗೋಪಾಲವಿಠ್ಠಲನ
ಕಾಣಿಸಿಕೊಡುವಂಥ ಶೂಲಿಯ ರಾಣಿ ೩

# ಶ್ರೀ ಮಹದೇವರ  ಸ್ತುತಿ

ಕಾಂಬೋದಿ ಝಂಪೆ

ಕೈಲಾಸವಾಸ ಗೌರೀಶ ಈಶ ಪ

ತೈಲಧಾರೆಯಂತೆ ಮನಸು ಕೊಡು ಹರಿಯಲ್ಲಿ ಶಂಭೋ ಅ.ಪ

ಅಹೋರಾತ್ರಿಯಲಿ ನಾನು ಅನುಚರಾಗ್ರಣಿಯಾಗಿ
ಮಹಿ ಎಲ್ಲ ಚರಿಸಿದೆನೊ ಮಹದೇವನೇ
ಅಹಿಭೂಷಣನೆ ಎನ್ನ ಅವಗುಣಗಳೆಣಿಸದೆಲೆ
ವಿಹಿತಧರ್ಮದಲಿಡು ವಿಷ್ಣುಭಕುತಿಯ ಕೊಡು ೧

ಮನಸು ಕಾರಣವಲ್ಲ ಪಾಪಪುಣ್ಯಕ್ಕೆಲ್ಲ
ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೇ
ದನುಜಮದಗಜಹರಿಯೆ* ದಂಡಪ್ರಣಾಮವ ಮಾಳ್ಪೆ
ಮಣಿಸು ಈ ಮನಸು ಸಜ್ಜನರ ಶಿರಿಚರಣದಲಿ ೨

ಭಾಗೀರಥೀಧರನೆ ಭವಭಯವ ಪರಿಹರಿಸಿ ಲೇ-
ಸಾಗಿ ವಲಿದೆನಗೆ ಶರ್ವದೇವ
ಭಾಗವತಜನಪ್ರಿಯ ವಿಜಯವಿಠ್ಠಲನಂಘ್ರಿ
ಜಾಗುಮಾಡದೆ ಭಜಿಪ ಭಾಗ್ಯವನೆ ಕೊಡು ಶಂಭೋ ೩

# ಶ್ರೀ ಭಾರತೀದೇವಿಯ ಸ್ತೋತ್ರ

ಆನಂದಭೈರವಿ ಅಟ

ಶರಣಜನರನೆಲ್ಲ ಪೊರೆವ ಭಾರತಿ ನಿನ್ನ ಚರಣಕ್ಕೆ
ಮೊರೆ ಹೊಗುವೆ| ಕೈ ಮುಗಿವೆ ಪ

* ಸಿಂಹ


ಕರೆಕರೆಗೊಳಿಸುವ ಕಠಿಣ ಭಯವನೆಲ್ಲ
ಪರಿಹಾರ ಮಾಡಬೇಕು। ಪರಾಕು ಅ. ಪ

ಸ್ತುತಿಯ ಮಾಡುವೆ ನಿನ್ನ ಸುತನ ಬಿನ್ನಪವನ್ನು
ಅತಿಶಯದಿ ಕೇಳಬೇಕು ಈ ವಾಕು
ಮತಿವಂತಜನರ ಸಮ್ಮತವಗೊಳಿಸುವಂಥ
ಜಿತವಾದ ಭಾಗ್ಯವೀಯೋ। ನೀ ಕಾಯೋ ೧

ಕಾಮಾದಿಗಳನೆಲ್ಲ ನೇಮದಿ ಗೆಲುವಂಥ
ಪ್ರೇಮಕವಚ ತೊಡಿಸೆ। ಉದ್ಧರಿಸೆ
ಭೂಮಿ ಕಾಮಿನಿಯರ ಹೇಮ ಹೇಯವೆನಿಸೆ
ಸೋಮಶೇಖರನ ಜನನೀ। ಸನ್ಮಾನೀ ೨

ಮಾತೆ ಯನ್ನಯ ಒಂದು ಮಾತ ಲಾಲಿಸುವುದು
ವಾತನ್ನನಿಜದಯಿತೇ। ಪ್ರಖ್ಯಾತೇ
ಖ್ಯಾತ ಶ್ರೀವರದಗೋಪಾಲವಿಠ್ಠಲನ ಯ-
ನ್ನಾತುಮದೊಳು ಸೂಚಿಸೇ। ಸುಮನಸೇ ೩

---



# ಶ್ರೀ ಪ್ರಾಣದೇವರ ಸ್ತೋತ್ರ

ಆರಭಿ ಆದಿ

ಸೂಕ್ತ ನಾಮಕ, ಸುಂದರಾನೇಕಸೂತ್ರನಾಮಕ ಪ

ಸೂತ್ರನಾಮಕ ಸತ್ಪಾತ್ರ ಗರುಡ ಶಿಖಿ-
ನೇತ್ರ ವಿನುತ ಶುಭ। ಗಾತ್ರ ಪವಿತ್ರ ಅ. ಪ

ರಾಮಪದಾಬ್ಜಭೃಂಗ ರಾವಣಭಂಗ
ಕಾಮಗಜಸಿಂಗ
ತಾಮಸಕುಲಕೆ ನೀ ಧೂಮಕೇತು ಬುಧ-
ಸೌಮನಸಾಗ್ರಣಿ ಕಾಮಿತಫಲದ ೧

ಪಾಂಡುನಂದನ ಪಾಲಿಸೋ ಎನ್ನ-
ಖಂಡಪಾವನ
ಅಂಡಜಾಧಿಪನ ಕಂಡು ಭಜಿಸಿ ದೋ-
ರ್ದಂಡ ಖಳಕುಲಕೆ ಚಂಡಪ್ರಚಂಡ ೨

ಜ್ಞಾನದಾಯಕ ಆನಂದತೀರ್ಥ
ದೀನಪೋಷಕ
ಭಾನುಕೋಟಿತೇಜ ವ್ಯಾಸವಿಠ್ಠಲನ
ಧ್ಯಾನದೊಳಿಹ ಸನ್ಮಾನಸಹಂಸ ೩



## ಶ್ರೀ ಲಕ್ಷ್ಮೀದೇವಿಯವರ ಸ್ತುತಿ

ಮಧ್ಯಮಾವತಿ ಅಟ

ಪಾಲಿಸೆ ಎನ್ನ ಇಂದಿರೆ ದೇವೀ ಪ

ಪಾಲಿಸೆ ನಾ ನಿನ್ನ ಪಾಲಿಗೆ ಬಂದಿರ್ಪೆ
ಶ್ರೀಲೋಲಪದಕೀಲಾಲಜ ತೋರಿ ಅ. ಪ

ಚಿತ್ಪ್ರಕೃತಿ ನಿತ್ಯಜಡಪ್ರಕೃತ್ಯಭಿಮಾನಿ
ಸತ್ಪ್ರಮಾಣವಾದ ಕೀರ್ತನೆ ನುಡಿಸುತ ೧

ಮಂತ್ರಗಳರಿಯೆನು ಮಂದಮತಿಯು ಸ್ವ-
ತಂತ್ರಡವನಲ್ಲ ಸೃಷ್ಟ್ಯಾದ್ಯಷ್ಟಕರ್ತ್ರೆ ೨

ಗುಣಪ್ರಕ್ರಿಯಂಗಳ ಅರಿತು ಉಳ್ಳ ಲ-
ಕ್ಷಣವಂತೆ ವಿಜಯವಿಠ್ಠಲನ ನಿಜಾಂಗನೆ ೩

## ದೇವರನ್ನು  ಕರೆಯುವುದು

ಮೋಹನ ಆದಿ

ಬಾರೋ ನಮ್ಮ ಮನಿಗೆ। ಗೋಪಾಲಕೃಷ್ಣ ಪ

ಗೊಲ್ಲಬಾಲಕರನ್ನು। ನಿಲ್ಲಿಸಿ ಪೆಗಲೇರಿ
ಗುಲ್ಲು ಮಾಡದೆ ಮೊಸ-। ರೆಲ್ಲ ಸವಿದ ಕೃಷ್ಣ ೧

ಕಸ್ತೂರಿ ತಿಲುಕವ। ಶಿಸ್ತಾಗಿ ಫಣೆಯೊಳಿಟ್ಟು
ಮಸ್ತಾಗಿ ಕುಣಿವ ಪರ। ವಸ್ತುವ ಕಾಣೆನಿಂದು ೨

ಮೂರ್ಜಗವನೆಲ್ಲ। ಬೊಜ್ಜೆಯೊಳಗೆ ಇಟ್ಟು
ಗೆಜ್ಜೆಯ ಕಟ್ಟಿ ತಪ್ಪು। ಹೆಜ್ಜೆಯನಿಕ್ಕುತ ೩

ನಾರೇರು ಬಿಚ್ಚಿಟ್ಟ। ಸೀರೆಗಳನೆ ಒಯ್ದು
ಮೇರೆಯಿಲ್ಲದೆ ಕರ। ತೋರಂದ ಶ್ರೀಕೃಷ್ಣ ೪

ಅಂಗನೆಯರ ವ್ರತ| ಭಂಗವ ಮಾಡಿದ
ಅಂಗಜನಯ್ಯ ಶ್ರೀ| ರಂಗವಿಠ್ಠಲರಾಯ ೫

—★—

# ದೇವರು ಬಂದುದು



ಪೂರ್ವಿ ಆದಿ

ಬಂದದ್ದೊಂದು ಚಂದ ಸಾಲದೆ| ಗೋಪಿಯ ಕಂದ ಪ

ವಿಕಟಾಂಗಿ ಪೂತನಿಯ ಕೊಂದು
ಶಕಟಾಸುರನ ಪಾದದಿ ತುಳಿದು
ಧಿಕ್ಕಿಟ ಧಿಕ್ಕಿಟ ಧಿಕ್ಕಿಟ ಎನುತಲಿ
ಅಕ್ಕರದಿಂದಲಿ ಕುಣಿಯುತ ಮನೆಗೆ ೧

ಗೋವರ್ಧನ ಪರ್ವತವನೆತ್ತಿ
ಗೋವುಗಳನೆ ಕಾಯ್ದು ತನ್ನ
ಮಾವ ಕಂಸನನ್ನು ಕೊಂದು
ಆವ ಕೂಡಿ ಪಾಡುತ ಮನೆಗೆ ೨

ಬಾಲಚಂದ್ರಶೇಖರನ
ಸುಲಭದಿಂದ ಬಾಧೆಯ ಬಿಡಿಸಿ
ಪಾ-ಲಿಸಿದ ಕರುಣದಿಂದ
ವೇಲಾಪುರದ ಚನ್ನಕೇಶವ ೩

—

## ಪ್ರಾರ್ಥನೆ

ಜಂಜೂಟ ಆದಿ

ಸದಾ ಎನ್ನ ಹೃದಯದಲ್ಲಿ ವಾಸಮಾಡೊ ಶ್ರೀಹರಿ ಪ

ನಾದಮೂರ್ತಿ ನಿನ್ನ ಪಾದ ಮೋದದಿಂದ ಭಜಿಸುವೆ ಅ. ಪ

ಜ್ಞಾನವೆಂಬೊ ನವರತ್ನದ ಮಂಟಪದ ಮಧ್ಯದಲ್ಲಿ
ವೇಣುಲೋಲನೆ ಕುಳ್ಳಿರಿಸಿ ಧ್ಯಾನದಿಂದ ಭಜಿಸುವೆ ೧

ಭಕ್ತಿರಸವೆಂಬ ಮುತ್ತುಮಾಣಿಕ್ಯದ ಹರಿವಾಣದಿ
ಮುಕ್ತನಾಗಬೇಕು ಎಂದು ಮುತ್ತಿನಾರತಿ ಎತ್ತುವೆ ೨

ನಾನು ನಿನ್ನ ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ
ಘನ್ನಮಹಿಮ ವಿಜಯವಿಠ್ಠಲ ನಿನ್ನ ಭಕ್ತರ ಕೇಳೊ ಸೊಲ್ಲ ೩

---

## ನೈವೇದ್ಯಸಮರ್ಪಣೆ ಮಾಡಿ ನಂತರ ನರ್ತನಸೇವೆ

ಪೂರ್ವಿ ಆದಿ

ವಿಠಲಯ್ಯ| ವಿಠಲಯ್ಯ ಪ

ತಟಿತ್ಕೋಟಿನಿಭಕಾಯ| ಜಗನ್ನಾಥವಿಠಲಯ್ಯ|
ವಿಠಲಯ್ಯ ಅ. ಪ

ಭಜಿಸುವೆ ನಿನ್ನನು| ಅಜಭವಸುರನುತ
ಭಜಕಾಮರತರು| ಕುಜನಕುಠಾರ ೧

ನೀ ಕರುಣಿಸದೆ| ನಿರಾಕರಿಸಲು ಎನ್ನ
ಸಾಕುವರಾರೋ ದಯಾಕರಮೂರುತಿ ೨

ಶರಣಾಗತರನು| ಪೊರೆವನೆಂಬ ತವ
ಬಿರುದುಕಾಯೋ| ಕರಿವರದಜಗನ್ನಾಥ ೩

---



## ಮಂಗಳ ಆರತಿ

ಸಾದನಾಮಕ್ರಿಯ ಅಟ

ಮಂಗಳಂ ಜಯಮಂಗಳಂ ಪ

ನಿಗಮವತಂದ ಮತ್ಸ್ಯಗೆ ನಿತ್ಯಮಂಗಳ
ಅಗಣಿತಕೂರ್ಮಗೆ ಅತಿಮಂಗಳ
ಜಗವನುದ್ಧರಿಸಿದ ವರಹಗೆ ಮಂಗಳ
ಮಗುವ ಕಾಯ್ದ ನರಸಿಂಹನಿಗೇ ೧

ದಾನವ ಬೇಡಿದ ವಾಮನಗೆ ಮಂಗಳ
ಕ್ಷೋಣಿಪರನು ಕೊಂದಗೆ ಮಂಗಳ
ಜಾನಕಿದೇವಿಯರಮಣಗೆ ಮಂಗಳ
ಜ್ಞಾನಿಗಳನೆ ಕಾಯ್ದ ಗೋಪಾಲಗೆ ೨

ಬುದ್ಧರೂಪದಲಿಹ ದೇವಗೆ ಮಂಗಳ
ಶುದ್ಧಅಶ್ವಾರೂಢಗೆ ಮಂಗಳ
ಮಧ್ವವಲ್ಲಭಹಯವದನಗೆ ಮಂಗಳ
ಉದ್ಧರಿಸುವ ದೇವರ ದೇವಗೆ ೩

ಮಂಗಳಂ

# ಶ್ರೀ ಮಂತ್ರಾಲಯಗುರುಗಳ ಸ್ತವನ

ಬೇಹಾಗ್ ಆದಿತಾಳ

ಶರಣರ †ಸುರಭೂಜ| ಗುರುರಾಜ ಪ

ವರಮಂತ್ರಾಲಯಪುರಮಂದಿರ ಸುಂ-
ದರ ಮುನೀಂದ್ರ ಭಾಸ್ಕರಸಮತೇಜ ೧

ಕಾಮಿತಾರ್ಥಗಳ ಕಾಮಧೇನುವಿನ
ನೇಮಮೀರಿ ಕೊಡುವೋ ಮಹರಾಜ ೨

ಭೇಶಕೋಟಿಸಂಕಾಶನಾದ ಕಮ-
ಲೇಶವಿಠ್ಠಲನ ದಾಸನೆ ಸಹಜ ೩

## ಸಮರ್ಪಣೆ

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾಽನುಸೃತಸ್ವಭಾವಂ
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ

ಈ ಶ್ಲೋಕವನ್ನು ಹೇಳಿ

ಅನಯಾ ಸೇವಯಾ
ಅಸ್ಮದ್ಗುರ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ-
ಶ್ರೀಕೃಷ್ಣಃ ಪ್ರೀಯತಾಮ್

ಎಂತ ಹೇಳಿ ನಮಸ್ಕಾರಸಮರ್ಪಣೆ ಮಾಡಬೇಕು.

† ಕಲ್ಪವೃಕ್ಷ

### ಶ್ರೀ ಸರ್ವಜ್ಞಶಾಸ್ತ್ರಗತ

# ಪದಾರ್ಥತರತಮವಿಚಾರ

★

ಪ್ರಕಾಶಸಂಹಿತೆಯಲ್ಲಿ—

"ಅಂಶಾನಂದಬಲಜ್ಞಾನದೇಶಕಾಲಾಪರೋಕ್ಷಕಾಃ
ಲಯಸೃಷ್ಟಿಪದಾವೇಶಗುಣಲಕ್ಷಣಕಾನ್ತಯಃ"

೧. ಅಂಶ, ೨. ಆನಂದ ೩. ಬಲ, ೪. ಜ್ಞಾನ, ೫. ದೇಶ (ವ್ಯಾಪ್ತಿ), ೬. ಕಾಲ, ೭. ಅಪರೋಕ್ಷ, ೮. ಲಯ, ೯. ಸೃಷ್ಟಿ, ೧೦. ಪದ (ಅಧಿಕಾರ), ೧೧. ಆವೇಶ, ೧೨. ಗುಣ, ೧೩. ಲಕ್ಷಣ, ೧೪. ಕಾಂತಿ (ಪ್ರಕಾಶ). ಹೀಗೆ ತಾರತಮ್ಯವು ೧೪ ಬಗೆ, ಎಂದರು ಶ್ರೀ ಬಾದರಾಯಣರು.

"ತಾರತಮ್ಯಪರಿಜ್ಞಾನೇ ಮಹಾತಾತ್ಪರ್ಯಮಿಷ್ಯತೇ"

ಎಂದರು ಶ್ರೀ ಪೂರ್ಣಪ್ರಜ್ಞರು. ಆ ವಚನದ ಆಶಯವನ್ನು ತಿಳಿಗನ್ನಡದಲ್ಲಿ ಶ್ರೀ ಜಗನ್ನಾಥದಾಸರವರು ಹರಿಕಥಾಮೃತಸಾರದಲ್ಲಿ ಗುಣತಾರತಮ್ಯಸಂಧಿಯ ೨೩ನೇ ಪದ್ಯದಲ್ಲಿ

"ತಾರತಮ್ಯಜ್ಞಾನ ಮುಕ್ತಿ—
ದ್ವಾರವೆನಿಪುದು ಭಕ್ತಜನರಿಗೆ
ತೋರಿ ಪೇಳಿ ಸುಖಾಬ್ಧಿಯೊಳು ಲೋಲ್ಯಾಡುವುದು ಬುಧರು
ಕ್ರೂರಮಾನವರಿಗಿದು ಕರ್ಣಕ—
ಠೋರವೆನಿಪುದು ನಿತ್ಯದಲಿ ಅಧಿ—
ಕಾರಿಗಳಿಗಿದನರುಪುವುದು ದುಸ್ತರ್ಕಗಳ ಬಿಟ್ಟು"

ಎಂದು ವಿಶದಮಾಡಿದ್ದಾರೆ.

ಈ ೧೪ ಬಗೆಯ ತಾರತಮ್ಯಜ್ಞಾನವನ್ನು ಚನ್ನಾಗಿ ಸಂಪಾದಿಸಿಕೊಂಡು ನಿತ್ಯವೂ ಚಿಂತಿಸಬೇಕು. ಹೀಗೆ ಮಾಡುವುದರಿಂದ ಬಹುಜನ್ಮಗಳ ಪಾಪ

ಪರಿಹಾರವಾಗಿ ಭಗವದನುಗ್ರಹಕ್ಕೆ ವಿಶೇಷತಃ ಪಾತ್ರರಾಗುತ್ತಾರೆಂದು ಶ್ರೀ ದಾಸರಾಯರ ವಾಕ್ಯಗಳಿವೆ.

"ಪ್ರಣತಕಾಮದನಂಘ್ರಿ ಸಂಪದವ-
ಶನವಪೇಕ್ಷೆಗಳುಳ್ಳವಗೆ ನಿ-
ಚ್ಚಣಿಕೆಯೆನಿಪುದು ಜಡಮೊದಲು ಬ್ರಹ್ಮಾಂತತರತಮವು
ಮನವಚನದಿಂ ಸ್ಮರಿಸುವರ ಭವ-
ವನಧಿ ಶೋಷಿಸಿಪೋಗುವುದು ಕಾ-
ರಣವೆನಿಸುವುದು ಜ್ಞಾನಭಕ್ತಿವಿರಕ್ತಿಸಂಪದಕೆ"

ಹರಿಕಥಾಮೃತಸಾರ, ಆರೋಹಣ ಅನುಕ್ರಮಣಿಕಾ ಸಂಧಿ ಪದ್ಯ ೧೭ ಇತ್ಯಾದಿ.

ಆದುದರಿಂದ "ಪದಾರ್ಥತರತಮವಿಚಾರ"ವನ್ನು ಇಲ್ಲಿ ಕೊಟ್ಟಿದೆ. ೧೪ ಬಗೆ ತಾರತಮ್ಯಗಳಲ್ಲಿ ಇದು ಒಂದು. ಹೆಂಗಸರೂ ಇದನ್ನು ತಿಳಿದುಕೊಳ್ಳಲೇಬೇಕು. ನಿತ್ಯವೂ ಒಮ್ಮೆಯಾದರೂ ಮನಮುಟ್ಟಿ ಚಿಂತನೆ ಮಾಡಿ ಭಗವದನುಗ್ರಹ ಪಡೆಯಲಿ. —ಸಂ.

೧. ಹರಿಃ— ಸರ್ವೋತ್ತಮ, ಸರ್ವತಂತ್ರ ಸ್ವತಂತ್ರ, ಗುಣಪೂರ್ಣ, ದೋಷವಿದೂರ, ಜಗಜ್ಜನ್ಮಾದಿಕಾರಣ, ಸ್ವರಮಣ.

೨. ಶ್ರೀ ಮಹಾಲಕ್ಷ್ಮೀದೇವಿಃ— ನಿತ್ಯಮುಕ್ತಳು, ನಿರ್ವಿಕಾರಳು, ನಿತ್ಯಸುಖಸಂಪೂರ್ಣಳು, ಶ್ರೀಹರಿಗೆ ದೇಶಕಾಲಗಳಲ್ಲಿ ಸಮಳು. ಗುಣದಿಂದ ಅಸಮಳು.

೩. ಬ್ರಹ್ಮ, ವಾಯು, ಋಜುಗಳು.
(ಕಲ್ಪಾದಿ ಅನೇಕರ ಏಕರು—ಶುಕ್ಲ ಶೋಣಿತ ಸಂಬಂಧ ರಹಿತರು.)

೪. ಸರಸ್ವತೀ, ಭಾರತೀ, ಋಜುದೇವಿಯರು:— ,,

೫. ಶೇಷ, ಗರುಡ, ರುದ್ರ, ಮಹದೇವ).

೬. ಜಾಂಬವತೀ, ಕಾಳಿಂದೀ, ನೀಲಾ, ಭದ್ರಾ, ಲಕ್ಷಣಾ, ಮಿತ್ರವಿಂದಾ(ಈ ಆರು ಮಂದಿಗಳು ಶ್ರೀಕೃಷ್ಣನ ಮಹಿಷಿಯರು).

೭. ವಾರುಣೀ (ಶೇಷದೇವರ ಪತ್ನಿ), ಸೌಪರ್ಣೀ (ಗರುಡ ದೇವರ ಪತ್ನಿ), ಪಾರ್ವತೀ (ರುದ್ರದೇವರ ಪತ್ನಿ).

೮. ಇಂದ್ರ, ಕಾಮ.

೯. ಅಹಂಕಾರಿಕ ಪ್ರಾಣ.

೧೦. ಸ್ವಾಯಂಭುವಮನು, ದಕ್ಷಪ್ರಜಾಪತಿ, ಬೃಹಸ್ಪತಿ, ಅನಿರುದ್ಧ, ಶಚಿ, ರತಿ.

೧೧. ಪ್ರವಹವಾಯು. (೪೭ ಮಂದಿ ವಾಯುಪುತ್ರರಿಗೆ ಅಧಿಪತಿಗಳು).

೧೨. ಸೂರ್ಯ, ಚಂದ್ರ, ಯಮ, ಶತರೂಪಾದೇವೀ (ಮಾನವೀದೇವಿ).

೧೩. ವರುಣದೇವರು.

೧೪. ನಾರದರು (ದೇವರ್ಷಿಗಳು).

೧೫. ಅಗ್ನಿದೇವರು, ಪ್ರಸೂತೀದೇವೀ (ದಕ್ಷನ ಪತ್ನಿ), ಭೃಗು.
ವಿ. ಸೂ.—ಪ್ರಹ್ಲಾದರಾಜರು. (ಇವರು ಕರ್ಮಜದೇವತೆಗಳಾದರೂ ಶ್ರೀ ನಾರದರ ಅನುಗ್ರಹದಿಂದ ಸಂಪಾದಿಸಿದ ಶ್ರೀ ವಾಯುದೇವರ ಸನ್ನಿಧಾನ ಪ್ರಯುಕ್ತ ಭೃಗುಋಷಿಗಳಿಗಿಂತ ಅಧಮರು, ವಸಿಷ್ಠಾದಿ ಋಷಿಗಳಿಗಿಂತ ಉತ್ತಮರು).

೧೬. ಮರೀಚಿ, ಅತ್ರಿ, ಆಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ವಿಶ್ವಾಮಿತ್ರ, ವೈವಸ್ವತಮನು (ವಿವಸ್ವಾನ್ನಾಮಕ ಸೂರ್ಯನ ಮಗ—ಶ್ರಾದ್ಧ ದೇವ).

೧೭. ಮಿತ್ರ, ನಿಋಋತಿ, ಪ್ರಾವಹಿ (ಪ್ರವಹ ಪತ್ನಿ), ತಾರಾ (ಬೃಹಸ್ಪತಿ ಪತ್ನಿ).

೧೮. ಗಣಪತಿ, ವಿಶ್ವಕ್ಸೇನ, ಕುಬೇರ, ಅಶ್ವಿನೀದೇವತೆಗಳು:—
(ಇವರಿಗೆ ಸಮಾನರು ಶತಸ್ಥಶೇಷರು ೮೫ ಜನರು).
೩ ರಿಂದ ೧೮ ಪೂರ್ತಿಯಿರುವವರು ಭಕ್ತಿ ಯೋಗಿಗಳು. ತತ್ತ್ವಾಭಿಮಾನಿ ದೇವತೆಗಳು.

೧೯. ಕರ್ಮಜದೇವತೆಗಳು:—(ಸಾಧನಕ್ಕೆ ಮುಂಚೆ ಅಪರೋಕ್ಷರಹಿತರು

ವಿಜ್ಞಾನಯೋಗಿಗಳು, ಸಾಧನಾನಂತರ ಅಪರೋಕ್ಷಜ್ಞಾನಿಗಳು).
ದೇವಜಾತಿ:— ಅಗ್ನಿಪುತ್ರ ಪಾವಕ, ವಾಯುಪುತ್ರ ಮರೀಚಿ (ತಾಪಸ), ಇಂದ್ರಪುತ್ರ ಜಯಂತ, ಯಜ್ಞ, ಶಂಭು.
ಋಷಿಜಾತಿ:— ಚ್ಯವನ, ಊಚಥ್ಯ, ಕರ್ದಮ, ಭಾರದ್ವಾಜಾದಿ ೮೦ ಮಂದಿ ಋಷಿಗಳು.
ಗಂಧರ್ವರು:—ಎಂಟುಜನ.
ಪಿತೃಗಳು:—ಏಳುಜನ (ಸಾಂಶರು)
ಅಪ್ಸರಸ್ತ್ರೀಯರು:— ೯೨ ಜನರು.
ಜಯವಿಜಯಾದಿ ದ್ವಾರಪಾಲಕರು:—೫೬ ಜನರು.
ಸನಕ, ಸನಂದನ, ಸನತ್ಸುಜಾತ:—ಬ್ರಹ್ಮದೇವರ ಮನಸ್ಸಿನಿಂದ [ಹುಟ್ಟಿದವರು.
ವಿಶ್ವಕರ್ಮ:—ದೇವಬಡಗಿ.
ರಾಹು, ಕೇತು, ಮಂಗಳ, ಶುಕ್ರಾಚಾರ್ಯರು.
ಚಿತ್ರಗುಪ್ತರು.
ಯಜ್ಞಸಾಧನ ಪದಾರ್ಥಾಭಿಮಾನಿ ದೇವತೆಗಳು.
ವಾಹನ ಜೀವರು:—ಐರಾವತ, ಉಚ್ಚೈಶ್ರವಸ್ಸು ಮುಂತಾದುವಕ್ಕೆ ಅಭಿಮಾನಿಗಳು.
ಹನ್ನೊಂದುಜನ ಮನುಗಳು.
ಬಲ್ಯಾದಿ ಇಂದ್ರರು ಏಳು ಜನ.
ಪುಣ್ಯಶ್ಲೋಕರಾದ ನೂರು ಮಂದಿ ರಾಜರು.

೨೦. ಭಾಗೀರಥೀ (ವರುಣಪತ್ನಿ). ಸಂಜ್ಞಾ (ಸೂರ್ಯಪತ್ನಿ). ರೋಹಿಣಿ (ಚಂದ್ರಪತ್ನಿ),—ಪರ್ಜನ್ಯ (ಮೇಘಾಭಿಮಾನಿ).

೨೧. ಅನಾಖ್ಯಾತ ದೇವತೆಗಳು:—

೨೨. ಸ್ವಾಹಾದೇವಿ:—ಅಗ್ನಿಪತ್ನಿ (ಮಂತ್ರಗಳಿಗೆ ಅಭಿಮಾನಿದೇವತಾ).

೨೩. ಬುಧ:—ಜಲಾಭಿಮಾನಿ.

೨೪. ಉಷಾ (ಸಾಮಾತ್ಮಿಕಾ ಉಷಾ), ಯಶೋದಾದೇವೀ, ದೇವಕೀದೇವೀ.

೨೫. ಶನ್ಯೈಶ್ಚರ, ಧರಾದೇವೀ.

೨೬. ಕರ್ಮಾಭಿಮಾನಿ ಪುಷ್ಕರ :—

ಗ೯ ರಿಂದ ೨೬ರ ಪೂರ್ತಿ ವಿಜ್ಞಾನ ಯೋಗಿಗಳು.

೨೭. ಅಜಾನಜ ದೇವತೆಗಳು:—ಅಗ್ನಿಪುತ್ರರು ೧೬೧೦೦ ಮಂದಿ— ಇವರು ಶ್ರೀಕೃಷ್ಣ ಪತ್ನಿಯರು. ಯಕ್ಷರು ೭೦. ದಾನವರು ೩೦. ಚಾರಣರು. ಅಪ್ಸರರು. ಗಂಧರ್ವರು. ಸಿದ್ಧರು. ಸಾಧ್ಯರು ವಿದ್ಯಾಧರರು. ಗುಹ್ಯಕರು. ನಾಗರು. ಕಿನ್ನರರು. ಕಿಂಪುರುಷರು. ಅಸುರರು. ರಾಕ್ಷಸರು. ಗೋಪಿಕಾಸ್ತ್ರೀಯರು,—ಕಾತ್ಯಾಯಿನೀವ್ರತಸ್ಥರು, ನೂರುಜನ ಕಮ್ಮಿ ಶತಕೋಟಿ ಋಷಿಗಳು. ಪಿತೃಗಳು.

೨೮. ಚಿರಪಿತೃಗಳು:—

೨೯. ದೇವಗಂಧರ್ವರು:—೨೭ ರಿಂದ ೨೯ರ ಪೂರ್ತಿ ಜ್ಞಾನಯೋಗಿಗಳು.

೩ ರಿಂದ ೨೯ರ ಪೂರ್ತಿ ಸಾಂಶರು.

೩೦. ಮನುಷ್ಯ ಗಂಧರ್ವರು:—

೩೧. ಮನುಷ್ಯರಾಜರು:—

೩೨. ಮನುಷ್ಯೋತ್ತಮರು:—

| | | | |
|---|---|---|---|
| ಮನುಷ್ಯೋತ್ತಮರು (ಮುಕ್ತಿಯೋಗ್ಯರು) | ಚರ—ಸ್ಥಾವರ | } | ನಿರಂಶರು |
| ಮನುಷ್ಯಮಧ್ಯಮರು (ನಿತ್ಯಸಂಸಾರಿಗಳು | ,, ,, | | |
| ಮನುಷ್ಯಾಧಮರು—*ತಮೋಯೋಗ್ಯರು— | ,, ,, | | |

| | | | |
|---|---|---|---|
| ಚರ:—ಮನುಷ್ಯ, ಪಶ್ವಾದಿಗಳು, ಖೇಚರ, | *ಪಿಶಾಚಗಳು | } | ಸಾಂಶರು |
| ಭೂಚರ, ಜಲಚರಪ್ರಾಣಿಗಳು-ಕ್ರಿಮಿಕೀಟಾದಿಗಳು | ರಾಕ್ಷಸರು | | |
| ಸ್ಥಾವರ—:ವೃಕ್ಷ, ಲತಾ, ತೃಣಾದಿಗಳು. | ದೈತ್ಯರು | | |

**ಸಂಪಾದಕೀಯ**

# 'ಅಂಕಿತ'

★

ಶ್ರೀಮದಾನಂದತೀರ್ಥ ಭಗವತ್ಪಾದರು, ಭಾರತೀಶ ಶ್ರೀ ವಾಯುದೇವರ ಅವತಾರರೆಂಬುದು 'ಬಳಿತ್ಥಾ ಸೂಕ್ತ' ಮೊದಲಾದ ವೇದವಾಕ್ಯಗಳಿಂದ ನಮಗೆ ತಿಳಿದಿದೆಯಷ್ಟೆ! ಆ ಮಹಾನುಭಾವರು: ಅವರ ಸನ್ಯಾಸಸ್ವೀಕಾರದ ನಂತರ ೩೭ ಗ್ರಂಥಗಳಲ್ಲಿ, ಶ್ರೀಹರಿಗೆ ತಾವು ಸಾಕ್ಷಾಚ್ಛಿಷ್ಯರಾದ ಕಾರಣ ಆ ಜಗನೊಡೆಯನಿಗೆ ಒಪ್ಪುವ ರೀತಿಯಲ್ಲಿ ಆ ಮೋಕ್ಷದಾಯಕನನ್ನು ಒಲಿಸುವ ಬಗೆಯನ್ನು ವಿಸ್ತರಿಸಿದ್ದಾರೆ ಎಂಬುದೂ ತಿಳಿದಿದೆಯಷ್ಟೆ!

ಶ್ರೀಹರಿಯು ಗಾನಲೋಲನಹುದೆಂದು ಲೋಗರಿಗೆ ಸಾರುವುದಕ್ಕೆ ಅವರ ಕೃತಿ (ಗ್ರಂಥ) ಗಳಲ್ಲಿ ಒಂದಾದ ಶ್ರೀ ದ್ವಾದಶಸ್ತೋತ್ರವು ಸಾಲದೆ! ಆ ಸ್ತೋತ್ರದಲ್ಲಿ ಶ್ರೀ ಶ್ರೀಮಧ್ವರು—

"ಆನಂದತೀರ್ಥಮುನೀಂಪ್ರಕೃತಾ ಹರಿಗೀತಿರಿಯಂ ಪರಮಾದರತಃ|
ಪರಲೋಕವಿಲೋಕನಸೂರ್ಯನಿಭಾ ಹರಿಭಕ್ತಿವಿವರ್ಧನಶೌಂಡತಮಾ||"

ಎಂದರು. ಈ ದ್ವಾದಶಸ್ತೋತ್ರವು ಪರಲೋಕ (ಮುಕ್ತಿ)ವನ್ನು ಐದಿಸಬಲ್ಲುದೆಂದೂ ಪರಲೋಕವನ್ನು ಹೊಂದುವುದಕ್ಕೆ ಪರಮಮುಖ್ಯ ಸಾಧನವು ಶ್ರೀಹರಿಭಕ್ತಿ ಎಂದೂ ಭಕ್ತಿಯುಕ್ತವಾದ ಗಾನಕ್ಕೆ ಶ್ರೀಹರಿಯು ಸಂಪೂರ್ಣವಶನಾಗುವುದು ನಿಶ್ಚಿತವೆಂದೂ ತಾತ್ಪರ್ಯ.

ಶ್ರೀ ಶ್ರೀಮನ್ಮಧ್ವಶ್ರೀಪಾದಂಗಳವರು ಸಾರಿದ್ದು ನಿಜವಾಗಿಯೂ ಶ್ರೀಹರಿದಾಸರಿಗೆ ಮೈಯುಬ್ಬುವ ಮಾತು. ಇಂದಿಗೂ ಶ್ರೀ ದ್ವಾದಶಸ್ತೋತ್ರವನ್ನು ಗಾನಮಾಡುವ ಭಕ್ತರಿದ್ದಾರೆ. ಮಾಧ್ವಸಂಸ್ಥಾನಗಳಲ್ಲಿ ಆ ಸ್ತೋತ್ರವನ್ನು ಶ್ರೀಪಾದಂಗಳವರು ತಮ್ಮ ಶಿಷ್ಯರೊಡಗೂಡಿ ಗಾನ ಮಾಡದೆ

ಪರಮಾತ್ಮಗೆ ನೈವೇದ್ಯಸಮರ್ಪಣೆ ಮಾಡುವುದಿಲ್ಲ. ಆ ಸ್ತೋತ್ರದ ದ್ವಾದಶ (ಹನ್ನೆರಡು) ಅಧ್ಯಾಯಗಳನ್ನು ಹಾಡಿದ ನಂತರ ಶ್ರೀಹರಿಯು, ತಾವು ಭಕ್ತಿಪುರಸ್ಸರ ಕೊಟ್ಟುದರಲ್ಲಿ ತನ್ನ ರಸವನ್ನು ಸ್ವೀಕರಿಸಿದನೆಂದು ಹಿಗ್ಗುತ್ತಾರೆ. ಅಂದಮೇಲೆ ಭಕ್ತಿಯುಕ್ತರಾಗಿ ಹರಿದಾಸರು ಹಾಡಿದರೆ ಶ್ರೀಹರಿಯು ತನ್ನ ಪರಿವಾರಸಹಿತ ನಮ್ಮ ಕರಗಳನ್ನು ಹಿಡಿದುಕೊಂಡು ಉದ್ಧರಿಸುತ್ತಾನೆಂಬ ಬಗ್ಗೆ ಯಾರಿಗೂ ಸಂದೇಹ ಉಳಿದಿಲ್ಲ!

ಶ್ರೀಲಕ್ಷ್ಮೀಪತಿಯನ್ನು ಗಾನಮಾಡಿ ಒಲಿಸಲು ಹೊರಡುವವರು ತಮ್ಮ ಕೃತಿಗಳಿಗೆ ಒಂದು ಅಂಕಿತ ಎಂದರೆ ಮುದ್ರಿಕೆ ಹಾಕಬೇಕೆಂದೂ ಶ್ರೀ ಪೂರ್ಣಪ್ರಜ್ಞರೇ ತೋರಿಸಿಕೊಟ್ಟಿದ್ದಾರೆ. ಪ್ರತಿ ಅಧ್ಯಾಯದ ಕೊನೆಯಲ್ಲೂ "ಆನಂದತೀರ್ಥ" ಎಂದು ಅಂಕಿತವಿಟ್ಟ ಪದ್ಯಗಳನ್ನು ಕಾಣಬಹುದು. ಅದೇ ದ್ವಾದಶಸ್ತೋತ್ರದಲ್ಲಿನ ನಿಯಮವನ್ನು ಅನುಸರಿಸಿಯೇ ಶ್ರೀ ನರಹರಿತೀರ್ಥಶ್ರೀಪಾದಂಗಳವರು "ರಘುಪತಿ" ಅಥವಾ "ನರಹರಿ" ಎಂಬ ಸಂಸ್ಥಾನದ ದೇವರ ಅಥವಾ ತಮ್ಮ ಇಷ್ಟದೇವರ ನಾಮರೂಪವಾದ ಮುದ್ರಿಕೆಯನ್ನು ಇಟ್ಟು ಕನ್ನಡದಲ್ಲಿ ಪದ್ಯ ಮೊದಲಾದವುಗಳನ್ನು ಹಾಡುತ್ತ ಬಂದರು. ಹೀಗೆ 'ಯಾರು ರಚನೆ ಮಾಡಿದ್ದು' ಎಂದು ಸುಲಭವಾಗಿ ತಿಳಿದುಕೊಳ್ಳುವ ಗುರುತಿಗೆ "ಅಂಕಿತ" ಎಂದು ಸಂಕೇತ.

ಪ್ರಕೃತ, ನಮ್ಮ ಶ್ರೀಮದಾನಂದತೀರ್ಥರು ಬದರಿಕಾಶ್ರಮಕ್ಕೆ ಶ್ರೀ ಉಡುಪಿಯಿಂದ ಹೊರಟು ೭ ಶತಮಾನಗಳಾದವು. "ಅದೃಶ್ಯೋ ರೌಪ್ಯಪೀಠೇಽಸ್ತಿ ದೃಶ್ಯೋಽಸ್ತಿ ಬದರೀ ತಟೇ" ಎಂದರೆ ಜನಗಳ ಕಣ್ಣಿಗೆ ಗೋಚರವಾಗದ ರೀತಿಯಲ್ಲಿ ಶ್ರೀ ಉಡುಪಿಕ್ಷೇತ್ರದಲ್ಲೂ, ಎಲ್ಲರಿಗೂ ಕಾಣುವ ರೀತಿಯಲ್ಲಿ ಶ್ರೀ ದೊಡ್ಡಬದರಿಯಲ್ಲೂ ಇದ್ದಾರೆ ಎಂಬುದಕ್ಕೆ ಪುರಾಣವಚನವು ಪ್ರಮಾಣ.

ಈ ಬದರಿಕಾಶ್ರಮಪ್ರವೇಶದ ದಿನವು ವೈಷ್ಣವರಿಗೆ ಪರಮ ಸವಿನೆನಪಿನ ದಿನ. ಈ ಪರ್ವವು ನಮ್ಮ "ಶ್ರೀಹರಿದಾಸಭಾರತೀ" ಪತ್ರಿಕೆಗೆ ಮೊದಲ ಮಧ್ವನವಮೀ. ಈ ಶುಭೋದಯ ಸಂದರ್ಭದಲ್ಲಿ ಮಾಘಮಾಸದ ಸಂಚಿಕೆಗೆ ಶ್ರೀಹರಿದಾಸಪಂಥದಲ್ಲಿ "ಅಂಕಿತ"ವನ್ನು

ಪಡೆಯುವ ಬಗೆಯನ್ನು ದೊಡ್ಡವರ ಮಾತಿನೊಡನೆ ಬರೆದು "ಆನಂದತೀರ್ಥ" ಎಂಬ ಅಂಕಿತವುಳ್ಳ ಶ್ರೀ ಭಗವತ್ಪಾದರ ಪೂರ್ಣ ಅನುಗ್ರಹಕ್ಕೆಪಾತ್ರರಾದವರ ವಿಶೇಷಪ್ರಸಾದವನ್ನು ಪಡೆಯಲಿಚ್ಛಿಸುತ್ತೇನೆ.

'ಅಂಕಿತ'ವೆಂಬುದು ಕಲಿಯುಗದಲ್ಲಿ ಶ್ರೀಮತ್ಪೂರ್ಣಪ್ರಜ್ಞರು, ಗಾನ ಮಾಡಿ ದೇವನನ್ನು ಮೆಚ್ಚಿಸುವುದನ್ನು ವೈಷ್ಣವರಿಗೆ ತಿಳಿಸಲೋಸುಗ ರಚಿಸಿದ ದ್ವಾದಶಸ್ತೋತ್ರದಲ್ಲಿ ಪ್ರಥಮತಃ ಕಾಣಬಹುದು. ಅವರ ಸಾಕ್ಷಾಚ್ಛಿಷ್ಯರಾದ ಶ್ರೀನರಹರಿತೀರ್ಥರು ಕನ್ನಡದಲ್ಲಿ ಹರಿಸ್ತೋತ್ರಗಳನ್ನು ಹಾಡಿ ಅಂಕಿತ ಇಡುವುದನ್ನು ಸಂಪ್ರದಾಯ ಹಾಕಿದರು. ಮುಂದೆ ಆದ್ಯರೆಂದು ಪ್ರಸಿದ್ಧರಾದ ೬೦ ಜನರ ಗುಂಪು "ಅಚಲಾನಂದವಿಠ್ಠಲ" ಮೊದಲಾಗಿ ಅಂಕಿತಪಡೆದು ಕನ್ನಡಗ್ರಂಥಗಳಲ್ಲಿ ಶಾಸ್ತ್ರಾರ್ಥಗಳನ್ನು ಬೀರುತ್ತ ಬಂದರು. ಬಹುಕಾಲ ಕಳೆದ ಮೇಲೆ ಶ್ರೀ ಶ್ರೀಪಾದರಾಜರು ಪರಮ-ಪುರುಷನನ್ನು ಕಂಡು ಮಾತಾಡುವ ಪ್ರಭುಗಳು—ಶ್ರೀ ಧ್ರುವಾಂಶರು, ಭಾಗವತಾದಿ ಶಾಸ್ತ್ರಗಳಲ್ಲಿನ ಮರ್ಮಗಳನ್ನು ಬಹು ಹೆಚ್ಚಿನ ರೀತಿಯಿಂದ ಕನ್ನಡದಲ್ಲಿ ಹೊರಗೆಡಹುತ್ತ ಉಪಾಸನಾಮೂರ್ತಿ "ಶ್ರೀರಂಗವಿಠ್ಠಲ"ನೆಂದು ಅಂಕಿತವಿಟ್ಟರು. ಅಲ್ಲಿಂದ ಶ್ರೀ ವ್ಯಾಸರಾಜರು ಅವರ ಶಿಷ್ಯರಾದ ಶ್ರೀ ವಾದಿರಾಜರು ಮೊದಲಾದ ಯತಿವರೇಣ್ಯರೂ "ಶ್ರೀಕೃಷ್ಣ" "ಹಯವದನ" ಮೊದಲಾದ ಅಂಕಿತದಿಂದ ಗುರುಗಳ ಆಶಯವನ್ನು ಕಾಪಾಡುತ್ತ ಬಂದರು. ಆ ಕಾಲದಲ್ಲೇ ಅವತರಿಸಿದ ಶ್ರೀನಾರದಾಂಶರಾದ ಶ್ರೀ ಪುರಂದರದಾಸವರ್ಯರಿಗೆ "ಪುರಂದರವಿಠ್ಠಲ" ಎಂಬ ಅಂಕಿತವನ್ನು ಶ್ರೀ ಶ್ರೀ ವ್ಯಾಸರಾಜಯತಿವರೇಣ್ಯರು ಭಗವದಾಜ್ಞೆಯಂತೆ ಅನುಗ್ರಹಿಸಿದರು. ಈ ಅಂಕಿತದಾನವು ಮುಂದೆ ಮುಂದೆ ಕ್ರಮವನ್ನನುಸರಿಸಿ ನಡೆಯುತ್ತ ಹೋಗಬೇಕೆಂದೂ ಅಧಿಕಾರ ಪಡೆಯದವನ ಕೃತಿಗಳ ಗಾನದಿಂದ ಶ್ರೀಹರಿಯು ಪ್ರೀತನಾಗುವುದಿಲ್ಲವೆಂದೂ ಶ್ರೀಪುರಂದರದಾಸರು ಸಾರಿಹೇಳಿದ್ದಾರೆ. ಹೀಗೆಯೇ ಶ್ರೀ ಸರ್ವಜ್ಞರ ಶಾಸ್ತ್ರವೂ, ಶಾಂತಿಪಾಠವು ಸದ್ಗುರುಗಳಲ್ಲಿ ಆಗದೆ ಫಲ ಕೊಡುವುದಿಲ್ಲ. ಶಾಂತಿಪಾಠವಾಗುವವರೆವಿಗೂ ಎಷ್ಟು ಚೆನ್ನಾಗಿ ಅರ್ಥ ತಿಳಿದುಕೊಂಡಿದ್ದರೂ ಆತನು ಶಾಸ್ತ್ರಕ್ಕೆ ಅಧಿಕಾರಿಯಲ್ಲ. ಅದರಂತೆ ಶ್ರೀಸರ್ವಜ್ಞರ ಶಾಸ್ತ್ರದ ಹೃದಯವನ್ನೇ ಬಿಚ್ಚಿ

ತೋರಿಸುತ್ತಿರುವ ಈ ದಾಸರಾಯರ ಗ್ರಂಥಗಳ ಬಗ್ಗೆ ಕೆಲವು ನಿಯಮಗಳುಂಟು. ಈ ವಿಷಯದಲ್ಲಿ ಶ್ರೀ ದಾಸರಾಯರಾಡಿದ ಕೆಲವು ಮಾತುಗಳನ್ನು ಬರೆದು ನಿಲ್ಲಿಸುತ್ತೇನೆ. "ಶ್ರೀಹರಿದಾಸಸುಳಾದಿಯಲ್ಲಿ" ಶ್ರೀ ದಾಸರಾಯರು—

"ಮನವೆ ಆಲಿಸಿ ಕೇಳು ಬಿನ್ನೈಸುವೆನು ನಿನಗೆ
ಚಿನುಮಯಮೂರುತಿಯ ಘನಗುಣನಾಮ ಕೀ-
ರ್ತನೆ ಮಾಳ್ಪ ಬಗೆಯನು ನಿನಗೆ ತಿಳಿಸುವೆನು
ಘನಮಹಿಮ ನಾರಾಯಣನ ಅಮಿತ ಅದ್ಭುತ ಶಕ್ತಿ
ಅನುಭವಕೆ ತಂದುಕೊಂಡು ತುತಿಸುವುದು
ಮನ ಮೊದಲಾದ ಸರ್ವೇಂದ್ರಿಯಂಗಳ ಆ-
ವನ ಪಾದದಲ್ಲಿಟ್ಟು ಕೀ-ರ್ತನೆ ಗೈಯೋ ಮನವೆ
ನಿನಗೆ ಮುಖ್ಯಗತಿಗೆ ಸಾಧನವೆಂದು ಸಾರಿದೆ
ಅನುಮಾನ ಮಾಡೆ ಸಲ್ಲ ಎಂದೆಂದಿಗು
ಬಿನುಗು ದೈವಂಗಳ ಕಾಲಿಲಿ ಒದ್ದು ಮಧ್ವ-
ಮುನಿಮತದಲ್ಲಿ ಬದ್ಧದೀಕ್ಷಿತನಾಗೊ ಕು-
ಜನರ ನೆರಹಿಕೊಂಡು ಕುಚೇಷ್ಟೆ ಕಥೆ ಪೇಳಿ
ಘನ ಅಂಧಂತಮಸಿನೊಳು ಬೀಳದಿರು
ವನಜಭವಾಂಡದೊಳು ಹರಿದಾಸತ್ವದೀಕ್ಷೆ-
ಬಲು ಕಷ್ಟ| ಕಷ್ಟವೆಂದು ಕಾಣೋ
ಮನುಜಾಧಮಗೆ ಇದು ಸುಲಭವಲ್ಲವೊ ಪ್ರಾಣಿ
ಇನಿತು ಇದರೊಳಗೆ ತ್ರಿವಿಧ ಬಗೆಯುಂಟು
ಗುಣವಂತನಾಗಿ ನೀನು ಕಾಲಕ್ರಮಣೆ ಮಾಡು
ಅನುದಿನದಲ್ಲಿ ಹರಿಸೇವೆಗೆ ವಿಮುಖನಾಗದೆ
ತನು ಉಬ್ಬಿ ರೋಮಾಂಚನ ಆನಂದಬಾಷ್ಪದಿ ಗಾನ-
ವನು ಮಾಡು ಘನ ಜ್ಞಾನ ಪುಟ್ಟುವುದು ಅನಿಮಿಷೇ-
ಶನ ಪ್ರೀತಿ ದಿನದಿನಕೆವೆಗ್ಗಳವಾಗುವುದು

ನಿನಗೆ ಪೇಳಿದೆ ಶುದ್ಧಭಾವವಿದನು ಮನಸಿಗೆ ತಂದುಕೊಂಡು
ಜ್ಞಾನಿಯಾಗೋ
ಗುಣಗಣಾಂಬುಧಿ ನಮ್ಮ ಪುರಂದರವಿಠ್ಠಲನು
ಅನುಸಾರಿಯಾಗಿ ತಾನೇ ಹಿಂದೆ ತಿರುಗುತಿಪ್ಪನು" ೧

ಹೀಗೆ ಹೇಳುತ್ತಾ

"ಪಾಮರ ಮನುಜರು ದಾಸವೇಷವ ಧರಿಸಿ ನೇಮನಿತ್ಯಗಳಿಲ್ಲ
ಪೋಗಾಡಿಸಿ
ಕಾಮಚಾರಿಗಳಾಗಿ ಕಂಡಲ್ಲಿ ಸಂಚರಿಸಿ ಮಾಮನೋಹರನ
ಲೀಲೆ ಪೇಳಿದರೇನೊ|
ತಾಮಸದಾಸನೆಂದು ತಿಳಿಯೋ ಘೋರ ತಮಸು ಅವಗಾಗುವುದು
ಸಂದೇಹವಿಲ್ಲ
ಈ ಮಹಿಯೊಳು ಮೃಷ್ಟಾನ್ನಭೋಜನ ವಸನವೇ
ಮಹಾಫಲವೆಂದು ಹಿಗ್ಗಿ ಕೆಟ್ಟು ಪೋಗುವನು"

ಎಂದು ಹೇಳಿದರು.

ಸೂತ್ರಗಳ ಹಾಗೆ, ಬಹು ಅರ್ಥಗಾಂಭೀರ್ಯ ಉಳ್ಳದಾಗಿ ಮಿತಾಕ್ಷರ ಉಳ್ಳ ಮಾತುಗಳನ್ನು ಶ್ರೀ ದಾಸರಾಯರು ಆಡುವಾಗ "ವನಜಭವಾಂಡದೊಳು ಹರಿದಾಸತ್ವದೀಕ್ಷೆಯನು ಬಲು ಕಷ್ಟ ಕಷ್ಟವೆಂದು ಕಾಣೊ" ಎಂದ ಮಾತನ್ನು ವ್ಯಾಖ್ಯಾನ ಮಾಡುತ್ತಾ ಶ್ರೀವಿಜಯದಾಸಾರ್ಯರು

"ಗುರುದಾಸರಾಯರೆನೆಗೆ ದಾಸತ್ವನೀಡೋ ಕ್ರಮ |
ಕರುಣದಿಂದಲಿ ವ್ಯಾಸಕಾಶಿಯಲಿ | ಹರುಷದಿಮನವುಬ್ಬಿ ಪೇ
ಳಿದ್ದೆ ಪೇಳುವೆನು" ಎಂಬುವ ಸುಳಾದಿಯಲ್ಲಿ "ಅಂಕಿತ" ಪ್ರದಾನ ಕ್ರಮ ಹೇಳುತ್ತಾ—

"ಮುನಿಮಧ್ವ ಹೃದಯವೆ ಪ್ರಾಕೃತ ಗ್ರಂಥವಿದು |
ಜನರಿಗೆ ಬೇಕಾದದೆ ಘನವಾದ ತೈತ್ತಿರೀಯ*ದಲ್ಲಿ ಪೇಳಿದಶಾಂತಿ

* ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಿದ ಶಾಂತಿಮಂತ್ರ

ಮನದಿಪೇಳಿಸುತ್ತ ತತ್ವಗಳ ಅನುವಾಗಿ ತಿಳಿಸುತ್ತ
ಶ್ರೀನಿವಾಸನ ಪಾದ-
ವನರುಹ ತೋರಬಹುದು ನಂಬಿದವರಿಗೆ
ವನಜನಾಭನಪಾದ ತುತಿಪಂಥ ಶಕ್ತಿಗೆ
ಘನಪದರೂಪದಂಕಿತವ ಕೊಟ್ಟು ಮತ್ತು
ಅನುನಯದಿ ಶಾಂತಿಪೇಳಿಸಿ ತತ್ವಗಳ
ಮನದಿಂದಲೀಯಬಹುದು ಸುಗುಣರಿಗೆ
ಮನುಜರಿಗಂಕಿತವು ಶಾಂತಿಯು ಯಿಲ್ಲದಲೆ
ಅನುವಾಗಿ ಪೇಳ್ದ ತತ್ವಗಳು ವ್ಯರ್ಥ ಕಾಣೊ
ದನುಜದಲ್ಲಣ ವಿಜಯ ವಿಠ್ಠಲನ ದಾಸತ್ವ-
ತನಧರಿಸೋದು ಬಲುಕಷ್ಟ ಕಷ್ಟನೆಂದೂ "

ಇಷ್ಟಂದುದೂ ಅಲ್ಲದೆ—

"ಸ್ವತಂತ್ರದಾಸನು ತುತಿಸಲು ಫಲವೇನು
ಸತತವಾಡುವಪುಣ್ಯಾಜಿತಕೆನಿಲ್ಲದಲೆ *ಅ-
ಸತಿಯುವ್ರತದಂತೆ ಚ್ಯುತವಾಗಿ ಪೋಪುದು
ಗತಿಗೆ ಸಾಧನವಿಲ್ಲ ರತಿಪತಿಪಿತ ನಮ್ಮ ವಿಜಯವಿಠ್ಠಲನ್ನ
ಅತಿದಯ ಪಡೆದವರ ಶಿಷ್ಯನಾಗದೆ ಗತಿಯಿಲ್ಲ ‖"

ಎಂದು ಒತ್ತಿ ಹೇಳಿದ್ದಾರೆ,

ಮತ್ತೊಂದು ಕಡೆ ಆ ಶ್ರೀವಿಜಯದಾಸರವರು ಮೇಲೆ ಹೇಳಿದಂತೆ ಅಂಕಿತವನ್ನು ಪಡೆಯುವುದಕ್ಕೆ ಮುಂಚೆ "ತಪ್ತಮುದ್ರಾಂಕಿತ ಧರಿಸಬೇಕು ಭುಜದಿ' 'ಸಿರಿಬೊಮ್ಮ ಭವಾದ್ಯರಿಗೆ ತರತಮಭೇದದಿಂದ ಎರಗಿ ಪೊರೆ ಎಂದಾಡಲಿಬೇಕು' 'ಅನ್ನಪಾನಕ್ಕೆ ಅವಸರಬೀಳದಿರಬೇಕು' 'ಅಂದವರು ತನಗೆ ಬಹು ಬಂಧುಗಳು ಎನಬೇಕು' 'ಇಂದ್ರಿಯಂಗಳನೆಲ್ಲ ನಿಗ್ರಹಿಸ ಬೇಕು' 'ಭಾವ ಶುದ್ಧದಿ ನಿತ್ಯ ತಿರುಗಬೇಕು' 'ಕಣ್ಣಿದ್ದೂ ಕುರುಡನೆಂದೆನಿ ಬೇಕು' ಇವೇ ಮೊದಲಾದ ಕೆಲವು ನಿಯಮಗಳನ್ನು ಹೇಳಿ ಎಚ್ಚರಿಸಿದ್ದಾರೆ.

ಹೀಗೆ ಜ್ಞಾನನಿಧಿಗಳು ಸಾರುತ್ತಿರುವಾಗ ಶ್ರೀಹರಿದಾಸ ಪಂಥದಲ್ಲಿ

---

* ಅಸತಿ = ಪತಿವ್ರತಾಧರ್ಮ ಕೆಟ್ಟವಳು

‘ಅಂಕಿತ’ದ ಮಹತ್ವವನ್ನರಿಯದೆ ಅಪಾರ್ಥ ಮಾಡಿಕೊಂಡು, ಪರಸ್ಪರ ಮತ್ಸರಿಸುತ್ತಾ ಕಾಲಯಾಪನೆ ಮಾಡುವುದಾಗಲಿ, ದಿವ್ಯಜ್ಞಾನಿಗಳ ಕೃತಿರತ್ನಗಳನ್ನು ಹೊರಗೆ ತರುವುದನ್ನು ಪ್ರತಿಬಂಧಿಸಿ ತಮ್ಮ ಕೀರ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಹಂಬಲಿಸುವುದಾಗಲಿ, ಸಂಪ್ರದಾಯಾನುಗತ ಕ್ರಮವನ್ನು ತೊರೆದು ಸ್ವತಂತ್ರರಾಗಿ ‘ಅಂಕಿತ’ ಇಟ್ಟುಕೊಂಡು ಬಿಡುವುದಾಗಲಿ, ಗುರುಗಳ ಮುಖದರ್ಶನವೇ ಇಲ್ಲದೆ ಅಂಚೆಕಛೇರಿಗಳ ಮೂಲಕ ‘ಅಂಕಿತ’ ಪಡೆಯುವುದಾಗಲಿ, ಭಾಷ್ಯಕಾರರು, ಟೀಕಾಕಾರರು, ಟಿಪ್ಪಣೀಕಾರರು ಮೊದಲಾದ ಜ್ಞಾನಿಗಳ ಇಂಗಿತವನ್ನರಿಯದೆ ಮನಬಂದಂತೆ ಶಾಸ್ತ್ರಗಳನ್ನು ಅರ್ಥಮಾಡಿಬಿಡುವುದಾಗಲಿ, ತಮ್ಮ ಪಾಡಿಗೆ ತಾವು ಕೆಡುವುದಲ್ಲದೆ ಶಾಸ್ತ್ರಕ್ಕೆ ಅಪಾರ್ಥ ಬರೆದು ಬೀರುವುದಾಗಲಿ, ಇವೆಲ್ಲವನ್ನೂ ಶ್ರೀಹರಿದಾಸವರರಾದ ಶ್ರೀಮದಾನಂದತೀರ್ಥರ ಮತ್ತು ಅವರ ಅನುಯಾಯಿಗಳಾದ ಜ್ಞಾನಿಗಳ ದ್ರೋಹವೆಂದೇ ನಿಶ್ಚಿತವಲ್ಲವೇ !

ಮುಂದಾದರೂ, ಹರಿದಾಸಪಂಥ ಬೇಕೆನ್ನಿಸುವವರು ಶಾಸ್ತ್ರಸಮ್ಮತ ಮಾರ್ಗದಲ್ಲಿ ನಡೆದು ಶಾಸ್ತ್ರದ ವಾಕ್ಯಗಳನ್ನು ಜ್ಞಾನಿಗಳ ಹೇಳಿಕೆಯಂತೆ ನಡೆನುಡಿಗಳಲ್ಲಿ ಅನುಸರಿಸುತ್ತಾ ಶ್ರೀಹರಿದಾಸರ ಅನುಗ್ರಹಕ್ಕೆ ಮತ್ತು ಮೋಕ್ಷದಾಯಕನಾದ ಶ್ರೀಹರಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಶ್ರೀ ಪೂರ್ಣಪ್ರಜ್ಞರು ಅನುಗ್ರಹಿಸಲಿ. ಶ್ರೀಹರಿಗೆ ಅತ್ಯಂತ ಪ್ರಿಯದಾಸರಾದ ಆ ಶ್ರೀ ಪೂರ್ಣಪ್ರಮತಿಗಳು ಶ್ರೀ ಭಾರತೀದೇವಿಯವರೊಡನೆ ನಮಗೆ ಅಭಯಪ್ರದಾನ ಮಾಡಲಿ.

“ಶ್ರೀಹರಿದಾಸಭಾರತೀ” ಯಿಂದ ಸಕಲ ಸಜ್ಜನರಿಗೆ ಹೆಚ್ಚು ಹೆಚ್ಚಿನ ತತ್ವಗಳನ್ನು ಬೀರಿಸಲಿ !

ಶ್ರೀ ಪೂರ್ಣಬೋಧರ ಬದರಿಕಾಶ್ರಮಗಮನದ ಸವಿನೆನಪಿನದಿನದಲ್ಲಿ ಅವರಲ್ಲಿ ನಮ್ಮ ಬೇಡಿಕೆ ಇದೇ.

“ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ”

---